

**ಆರ್ಯನ್ ರಾಜ್**
ಸ್ಟಾರ್‌ಸುವರ್ಣ
'ಹರಹರ ಮಹಾದೇವ'
ವಿಷ್ಣು

# ಮಾಡೆಲಿಂಗ್‌ನಿಂದ ಕಿರುತೆರೆಗೆ

★ *ಮುಂಬೈ- ಬೆಂಗಳೂರು ನಿರಂತರ ಓಡಾಟ ಹೇಗೆನಿಸುತ್ತಿದೆ?*

ಯಾವತ್ತೋ ಒಮ್ಮೆ ಮುಂಬೈಗೆ ಹೋಗುತ್ತಿದ್ದ ನಾನು 'ಮಹಾದೇವ'ಕ್ಕಾಗಿ ನಿರಂತರ ಓಡಾಡಬೇಕಾಯಿತು. ಆರಂಭದಲ್ಲಿ ಬೇಸರ ಅನ್ನಿಸುತ್ತಿತ್ತು. ಈಗ ಅಲ್ಲಿಯೂ ಜನರು ಪರಿಚಯವಾಗಿದ್ದಾರೆ. ಕೆಲಸದ ಒತ್ತಡದಲ್ಲಿ ಬೇಸರಕ್ಕೆ ಅವಕಾಶ ಇಲ್ಲ. ಊಟ ಏಕೋ ನನಗೆ ಮೊದಲು ಹಿಡಿಸಲಿಲ್ಲ. ದೊಡ್ಡ ಕಿರಿಕಿರಿ ಅನ್ನಿಸಿದ್ದು ಮೊಬೈಲ್ ನೆಟ್‌ವರ್ಕ್. ಅದು ಸರಿಯಾಗಿ ಸಿಗುತ್ತಿರಲಿಲ್ಲ. ನಾವು ವಸತಿ ಮಾಡಿರುವ ಸ್ಥಳ ನಗರದಿಂದ ದೂರ ಇರುವ ಕಾರಣಕ್ಕೆ ತೊಂದರೆಯಾಗುತ್ತಿತ್ತು. ಈಗ ಅದೂ ಸುಧಾರಣೆಯಾಗಿದೆ. ನಾನೂ ಸಂಪೂರ್ಣ ಹೊಂದಿಕೊಂಡಿದ್ದೇನೆ.

ಅಲ್ಲಿ ಕಲಿತ ಮಹತ್ವದ ಸಂಗತಿ ಎಂದರೆ ನಮ್ಮ ತಂಡಕ್ಕೆ ಕೆಲಸ ಮಾಡುವ ಎಲ್ಲರನ್ನೂ ಗೌರವದಿಂದ ಮಾತನಾಡುವುದು. ಸಾಮಾನ್ಯವಾಗಿ ನಮಗೆ ಸಹಾಯಕ್ಕೆ ಬರುವ ಮೇಕಪ್‌ಮನ್ ಇರಬಹುದು ಕಾಸ್ಟ್ಯೂಮ್ ಡಿಸೈನರ್ ಇರಬಹುದು ಎಲ್ಲರನ್ನೂ 'ದಾದಾ' ಎಂದೇ ಕರೆಯುತ್ತೇವೆ. ಗೌರವ ಸಂಭೋದನೆ ತುಂಬಾ ಇಷ್ಟ ಆಯ್ತು.

★ *ನೀವು ರಂಗಾಭಿರುಚಿ ಬೆಳೆಸಿಕೊಂಡಿದ್ದು ಹೇಗೆ?*

ರಾಯಚೂರು ಜಿಲ್ಲೆ ಮಸ್ಕಿ ನಮ್ಮೂರು. ಅಲ್ಲಿಯ ಕನ್ನಡ ಶಾಲೆಯಲ್ಲಿ ಓದಿದೆ. ಆದಪ್ಪ ಎಂಬ ಶಿಕ್ಷಕರಿದ್ದರು. ಅವರು ನನಗೆ ಮೊದಲು ವೇದಿಕೆಯ ರುಚಿ ಹತ್ತಿಸಿದರು. ನಮಗೆ ಪಠ್ಯವಾಗಿದ್ದ ದ.ರಾ.ಬೇಂದ್ರೆ ಅವರ 'ಕಿಸಾಗೌತಮಿ'ಯನ್ನು ರೂಪಾಂತರ ಮಾಡಿ ನನ್ನಿಂದ ಏಕಪಾತ್ರಾಭಿನಯವನ್ನು ಅವರು ಮಾಡಿಸಿದ್ದರು. ರಾಜ್ಯಮಟ್ಟದವರೆಗೂ ಅದನ್ನು ಅಭಿನಯಿಸಿದೆ.

ನಮ್ಮೂರಲ್ಲಿ 'ವೆಂಕಟಮ್ಮ' ದೇವಸ್ಥಾನವಿದೆ. ನವರಾತ್ರಿಯಲ್ಲಿ ಗುಡಿ ಹತ್ತಿರ ನಾಟಕ ಆಡುವುದು ಆ ಊರ ಪದ್ಧತಿ. ನಾನು ನಿರಂತರ ಏಳು ವರ್ಷಗಳ ಕಾಲ ಅಲ್ಲಿ ನಾಟಕ ಆಡಿದೆ. ಮೊದಲ ಬಾರಿಗೆ 'ಶಿವ'ನ ಪಾತ್ರ ಮಾಡಿದ್ದೆ. 'ಮಹಾದೇವ'ನನ್ನ ಮೊದಲ ಧಾರಾವಾಹಿ. ಇಲ್ಲಿ 'ವಿಷ್ಣು' ಪಾತ್ರ ಮಾಡುತ್ತಿದ್ದೇನೆ.

★ *ವಿಷ್ಣು– ಮಹಾದೇವರ ಸಂಘರ್ಷ– ಸಂಬಂಧದ ಬಗ್ಗೆ ಹೇಳಿ*

ವಿಷ್ಣುವಿಗೆ ತನ್ನ ಪತ್ನಿ ಲಕ್ಷ್ಮಿ ಜೊತೆ ಜಗಳ ಆಗುತ್ತದೆ. ಆಗ ವಿಷ್ಣು ಸ್ಮರಣಹೀನನಾಗಿ ದೇವಲೋಕದಿಂದ ಮರ್ತ್ಯ ಲೋಕಕ್ಕೆ ಬಂದು ಬಿಡುತ್ತಾನೆ. ಆಗ ಶಿವ ಸ್ಮರಣೆಯನ್ನು ತರಬೇಕು ಎಂದು ಒಂದು ಯುದ್ಧವನ್ನು ಹೂಡುತ್ತಾನೆ. ಆ ಸನ್ನಿವೇಶ ಸಿಕ್ಕಾಪಟ್ಟೆ ಜನಪ್ರಿಯವಾಗಿತ್ತು. ವಿಷ್ಣು– ಶಿವನ ನಡುವೆ ಯುದ್ಧ ಸಂಘರ್ಷ ನಡೆಯುವ ಹೊತ್ತಲ್ಲಿ ಗಣೇಶ ಮಧ್ಯ ಪ್ರವೇಶಿಸಿ ಯುದ್ಧವನ್ನು ಶಮನ ಮಾಡಿ ವಿಷ್ಣುವಿಗೆ ಸ್ಮರಣೆ ಬರುವಂತೆ ಮಾಡುತ್ತಾನೆ. ನಂತರ ವಿಷ್ಣು ದೇವಲೋಕ ಪ್ರವೇಶ ಮಾಡುತ್ತಾನೆ. ಇದು ಶಿವನ ಕಥೆಯಾಗಿದ್ದರೂ ವಿಷ್ಣುವಿಗೂ ಸಾಕಷ್ಟು ಅವಕಾಶವನ್ನು ನೀಡಲಾಗಿದೆ.

★ *ಈ ಮೊದಲು ಏನು ಮಾಡುತ್ತಿದ್ರಿ?*

ಫ್ಯಾಷನ್ ಮಾಡೆಲಿಂಗ್ ಆಗಿದ್ದೆ. ನಾಲ್ಕು ವರ್ಷ ಅದರಲ್ಲೇ ತೊಡಗಿದ್ದೆ. 'ಕೂಲ್ ಪಿಕ್ಚರ್ ಕ್ಯಾಲೆಂಡರ್'ನಲ್ಲಿಯೂ ಮಾಡೆಲಿಂಗ್ ಮಾಡಿದ್ದೆ. ಅಷ್ಟರಲ್ಲಿ ಕನ್ನಡ ಬೆಳ್ಳಿತೆರೆಗೆ ಕಾಲಿಟ್ಟೆ. 'ರೆಡ್' ಸಿನಿಮಾದಲ್ಲಿ ನಟಿಸಿದೆ. ಸದ್ಯ 'ಮಿರರ್' ಸಿನಿಮಾ ಬಿಡುಗಡೆಯಾಗಬೇಕು. ಮಹಾದೇವ ಮುಗಿಯುವ ತನಕ ಬೇರೆ ಯಾವುದರಲ್ಲೂ ನಟಿಸುವುದಿಲ್ಲ.

★ *ಸೌದಿ ಕನಸು ಬಿಟ್ಟಿದ್ದೇಕೆ?*

ಕಲಬುರ್ಗಿಯಲ್ಲಿ ಮೆಕ್ಯಾನಿಕಲ್ ಡಿಪ್ಲೊಮಾ ಮಾಡಿದೆ. ಆಗ ದುಬೈಗೆ ಹೋಗುವ ಕನಸಿತ್ತು. ಬೆಂಗಳೂರಿನಲ್ಲಿ ಬಿಇ ಮಾಡಿದೆ. ಅದಾದ ಮೇಲೆ ಕಂಪೆನಿಯೊಂದರಲ್ಲಿ ಕೆಲಸಕ್ಕೂ ಸೇರಿದೆ. ಕಾಲೇಜಿನಲ್ಲಿ ಮಾಡೆಲಿಂಗ್‌ನಿಂದ ಪರಿಚಿತನಾಗಿದ್ದೆ. ಸ್ನೇಹಿತರ ಒತ್ತಾಸೆ, ಜೊತೆಗೆ ನನ್ನ ಮನದ ಮೂಲೆಯಲ್ಲಿ ಮನೆ ಮಾಡಿದ್ದ ಬಣ್ಣದ ಲೋಕಕ್ಕೆ ಆಕರ್ಷಿತನಾದೆ. ಹಾಗಾಗಿ ಅದನ್ನೇ ವೃತ್ತಿಯಾಗಿ ತೆಗೆದುಕೊಂಡೆ. ಈಗ ಇಲ್ಲೇ ಉಳಿದು ಬೆಳೆಯಬೇಕು.

■ ರಾಘವೇಂದ್ರ